ಗ್ರೀನ್ ಡಾಟ್ ಟ್ರಸ್ಟ್

# ನೆಲೆ

ತ್ರೈಮಾಸಿಕ ಪತ್ರಿಕೆ

GREEN DOT TRUST (R)

A new ray of Rural and Urban Development

(Reg. No.: 507/2008-09)

**Postal Address:**
No. 917, 3rd Cross, Behind Mylara Darshini Hotel, Aravindanagara, Mysore -570023
Phone: 0821-2957806

September 2021 | For Free Circulation Only | Pages 4

**NELE-** Old Age Home for Women, Dasanakoppalu Main Road, Roopanagara, Mysore, Mob: 9686150002
**Manasadhama** – Home for the homeless mentally ill persons, Sy. No. 109, Bhugathagalli Road, T. Narasipura Main Road, Mysore - 570028, Mob: 9686140001
**Madikeri Office**: Kaveri Layout, Opp. Neharu Yuva Kendra, Madikeri Town
**Primary Health Center**: Kanoor, Virajpet Taluk, Kodagu District

## ಸನ್ನಿ–ಡೆಲಿರಿಯಂ

### ಪ್ರಜ್ಞಾಸ್ಥಿತಿಯಲ್ಲಿ:–

ವ್ಯತ್ಯಾಸ:– ರೋಗಿಗೆ ಸ್ಥಳ, ಕಾಲ, ಜನರ ಬಗ್ಗೆ ಗೊಂದಲವಿರುತ್ತದೆ. ತಾನೆಲ್ಲಿದ್ದೇನೆ, ತನ್ನ ಸುತ್ತ–ಮುತ್ತ ಯಾರಿದ್ದಾರೆ, ಸಮಯ ಎಷ್ಟು, ತನ್ನ ಬೇಕು ಬೇಡಗಳೇನು, ತನಗೇನಾಗಿದೆ ಗೊತ್ತಾಗುವುದಿಲ್ಲ. ಯಾರಾದರೂ ಮಾತಾಡಿದರೆ ಪ್ರಶ್ನೆ ಕೇಳಿದರೆ, ಅವರೇನು ಮಾತಾಡುತ್ತಿದ್ದಾರೆ, ಅವರ ಪ್ರಶ್ನೆ ಏನು ಎಂಬುದನ್ನು ವ್ಯಕ್ತಿ ಅರ್ಥ ಮಾಡಿಕೊಳ್ಳಲಾರ, ಹೀಗಾಗಿ ರೋಗಿಯ ಮಾತು–ವರ್ತನೆ ಅಸಂಬದ್ಧವಾಗಿರಬಹುದು. ರೋಗಿ ತನ್ನ ಬೇಕು ಬೇಡಗಳನ್ನು ನಿರ್ಲಕ್ಷಿಸಬಹುದು:– ಹಸಿವಾದರೂ ಊಟ ಮಾಡುವುದಿಲ್ಲ, ಬೆಳಿಗ್ಗೆ ಎದ್ದು ಸ್ನಾನ ಮಾಡುವುದಿಲ್ಲ, ಕೊಳಕಾದ ಬಟ್ಟೆಗಳನ್ನು ಬದಲಿಸುವುದಿಲ್ಲ, ಗಾಯವಾಗಿ ರಕ್ತ ಸುರಿಯುತ್ತಿದ್ದರೂ ಅದನ್ನು ಗಮನಿಸುವುದಿಲ್ಲ, ಕಾಯಿಲೆಯ ಲಕ್ಷಣಗಳಿದ್ದರೂ ಆಸ್ಪತ್ರೆಗೆ ಬರುವುದಿಲ್ಲ, ಔಷಧಿ ಸೇವಿಸುವುದಿಲ್ಲ, ತನ್ನ ರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಿಲ್ಲ. ಅಗತ್ಯ ವಸ್ತುಗಳನ್ನು, ಬೆಳೆ ಬಾಳುವ ವಸ್ತುಗಳನ್ನು ಹಾಳು ಮಾಡಬಹುದು, ತನ್ನ ಮಕ್ಕಳ, ಆಶ್ರಿತರ ಯೋಗಕ್ಷೇಮವನ್ನು ಗಮನಿಸುವುದಿಲ್ಲ, ದಿಕ್ಕು ದೆಸೆಯಿಲ್ಲದೆ ಓಡಾಡಬಹುದು, ಮನೆ ಬಿಟ್ಟು ಹೋಗಬಹುದು ಹಾಸಿಗೆ, ಬಟ್ಟೆಯಲ್ಲೇ ಮಲ ಮೂತ್ರ ಮಾಡಿಕೊಳ್ಳಬಹುದು, ಮನೆಯಲ್ಲೇ, ಕುಳಿತಲ್ಲೇ ಉಗಿಯಬಹುದು, ಕಸಹಾಕಬಹುದು.

### ಕಾರಣಗಳು;–

ಯಾವುದೇ ಕಾರಣದಿಂದ ಥಟ್ಟನೆ ಜ್ವರ ಬಂದು ಅದು ಹೆಚ್ಚಾದಾಗ ಸನ್ನಿಯ ಲಕ್ಷಣಗಳು ಕಾಣಿಸಿಕೊಳ್ಳುತ್ತದೆ. ವಾಂತಿ, ಬೇಧಿ, ವಿಪರೀತ ರಕ್ತಸ್ರಾವ – ಹೀಗೆ ದೇಹದ ನೀರಿನಂಶ ಹೊರಹೋಗಿ ಡಿಹೈಡ್ರೇಷನ್ ಸ್ಥಿತಿಯುಂಟಾಗುತ್ತದೆ. ರಕ್ತದಲ್ಲಿ ಜೀವಕೋಶಗಳಲ್ಲಿ ನೀರು–ಲವಣಾಂಶಗಳ ಪ್ರಮಾಣ ಏರುಪೇರಾಗಿ ಡೆಲಿರಿಯಾ ಉಂಟಾಗುತ್ತದೆ. ಅಪಘಾತದಲ್ಲಿ, ತಲೆಗೆ ಭಾರವಾದ ವಸ್ತುವಿನಿಂದ ಪೆಟ್ಟು ಬಿದ್ದು, ಮಿದುಳಿಗೆ ಆಘಾತವಾಗಬಹುದು, ಫಿಟ್ಸ್ ಬಂದು ನಿಂತ ಮೇಲೆ, ಕೆಲವು ನಿಮಿಷ (ಅ) ಗಂಟೆಗಳ ಕಾಲ ಡೆಲಿರಿಯ ಇರಬಹುದು, ಮಾದಕ ವಸ್ತುಗಳು ಮತ್ತು ಆಲ್ಕೋಹಾಲ್ ಚಟ ಬೆಳೆಸಿಕೊಂಡ ವ್ಯಕ್ತಿ ಈ ವಸ್ತುಗಳನ್ನು ಒಂದು ದಿನ ನಿಗದಿತ ಪ್ರಮಾಣದಲ್ಲಿ ಸೇವಿಸದಿದ್ದರೆ ಹಿಂದೆತೆಗೆದ ಚಿನ್ಹೆಗಳು ಕಾಣಿಸಿಕೊಳ್ಳುತ್ತವೆ, ಡೆಲಿರಿಯಂ ಕೂಡ ಹಿಂದೆಗೆತೆದ ಚಿನ್ಹೆಯಾಗಬಹುದು, ಬ್ಯಾಕ್ಟೀರಿಯಾ/ವೈರಸ್‌ಗಳ ಸೋಂಕಿನಿಂದ ಮಿದುಳು, ಮಿದುಳ ಪೊರೆಗಳು ಹಾನಿಗೀಡಾದಾಗ, ಸನ್ನಿ ಕಾಣಿಸಿಕೊಳ್ಳಬಹುದು, ಆಕಸ್ಮಿಕ (ಅ) ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ಯಾವುದೇ ವ್ಯಕ್ತಿ ವಿಷವಸ್ತುಗಳನ್ನೋ (ಅ) ಅಧಿಕ ಪ್ರಮಾಣದಲ್ಲಿ ಯಾವುದಾದರೂ ಮಾತ್ರೆಗಳನ್ನೋ ಸೇವಿಸಿದಾಗ 'ಸನ್ನಿಗೆ' ತುತ್ತಾಗಬಹುದು. ಕಷ್ಟಕರವಾದ ಹೆರಿಗೆ, ವಿಪರೀತ ರಕ್ತಸ್ರಾವ, ಸೋಂಕು, ಮನೋ ಸಾಮಾಜಿಕ ಸಮಸ್ಯೆಗಳು, ನಿರಾಶೆಗಳು ಬಾಣಂತಿ ಸನ್ನಿಗೆ ಕಾರಣವಾಗಬಹುದು. ಸಿಹಿ ಮೂತ್ರ ರೋಗವಿರುವ ವ್ಯಕ್ತಿಗಳು–ಗ್ಲೂಕೋಸ್ ಪ್ರಮಾಣ ೬೦ ಮಿ. ಗ್ರಾಂ. ಗಿಂತ ಕಡಿಮೆಯಾದರೆ (ಅ) ೩೦೦–೪೦೦ ಮಿ, ಗ್ರಾಂ, ಗೆ ಏರಿದಾಗಲೂ ಸನ್ನಿ ಕಾಣಿಸಿಕೊಳ್ಳಬಹುದು, ವಾತಾವರಣದಲ್ಲಿ ಆಮ್ಲಜನಕದ ಕೊರತೆಯಿಂದ (ಅ) ಕಾರ್ಬನ್ ಡೈಯಾಕ್ಸೈಡ್ (ಅ) ಮಾನಾಕ್ಸೈಡ್ ಹೆಚ್ಚಾದಾಗ ಸನ್ನಿ ಕಾಣಿಸಿಕೊಳ್ಳುತ್ತದೆ. ಶಸ್ತ್ರಕ್ರಿಯೆಯ ನಂತರ ಕೆಲವು ರೋಗಿಗಳು ಅರವಳಿಗೆ ಔಷದಿಗಳಿಂದಾಗಿ ಡೆಲಿರಿಯಂ ಸ್ಥಿತಿಗೆ ಹೋಗುತ್ತಾರೆ.

ಅರೆಪ್ರಜ್ಞಾವಸ್ಥೆಗೆ ಜಾರಬಹುದು, ನೋವಿಗೆ ಮಾತ್ರ ಸ್ಪಂದಿಸಬಹುದು, ಮಾತು, ಸ್ಪರ್ಶ, ಧ್ವನಿ, ನೋಟಕ್ಕೆ ಸ್ಪಂದಿಸುವುದಿಲ್ಲ. ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವುದು, ಕೂಗುವುದು, ಕಿರಿಚಾಡುವುದು, ಯಾರೊಂದಿಗೋ ಸಂಭಾಷಿಸಿದಂತೆ ಮಾತಾಡುವುದು, ಅದೃಶ್ಯ ವ್ಯಕ್ತಿಗಳನ್ನು ಹೆದರಿಸುವುದು, ಅರ್ಥವಿಲ್ಲದೇ ಗೊಣಗಾಡಬಹುದು.

**ಭಾವೋದ್ವೇಗ:** ವಿನಾಕಾರಣ (ಅ) ಅಲ್ಪಕಾರಣಕ್ಕೆ ಭಯಪಡಬಹುದು, ಸಿಟ್ಟಿಗೇಳಬಹುದು, ದುಃಖ ಪಡಬಹುದು, ಕ್ಷಣ ಕ್ಷಣಕ್ಕೆ ಭಾವನೆ ಏರುಪೇರಾಗಬಹುದು, ಹಿಂಸಾಚಾರ, ಆಕ್ರಮಣ ಶೀಲತೆಯನ್ನು ಪ್ರಕಟಿಸಬಹುದು, ಭ್ರಮೆಗಳು–ನೋಡಿ ಯಾರೋ ನನ್ನನ್ನು ಕೊಲ್ಲಲು ಬರುತ್ತಿದ್ದಾರೆ, ನನ್ನ ಹಣ ವಸ್ತುಗಳನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದಾರೆ, ನನ್ನ ಮಕ್ಕಳನ್ನು ಅಪಹರಿಸಿದ್ದಾರೆ, ನನ್ನ ಮೈ ಮೇಲೆ ಸಾವಿರಾರು ಇರುವೆ, ಹಾವು, ಚೇಳುಗಳು ಹರಿದಾಡುತ್ತಿವೆ, ನನ್ನನ್ನು ಕಚ್ಚುತ್ತಿವೆ ಎನ್ನಬಹುದು, ಯಾರೋ ನನ್ನನ್ನು ಬೈಯುತ್ತಿದ್ದಾರೆ, ಹೆದರಿಸುತ್ತಿದ್ದಾರೆ, ಕೆಟ್ಟ ಮಾತುಗಳಲ್ಲಿ ಟೀಕಿಸುತ್ತಿದ್ದಾರೆ ಎನ್ನಬಹುದು, ಎಲ್ಲರೂ ನನ್ನ ವಿರುದ್ಧ ಸಂಚು ಮಾಡುತ್ತಿದ್ದಾರೆ, ನನಗೆ ಅವಮಾನ ಮಾಡಲು ಸಿದ್ಧತೆ ಮಾಡುತ್ತಿದ್ದಾರೆ ಎನ್ನಬಹುದು. ಯಾವ ವಾಸನೆ ಇಲ್ಲದಿದ್ದರೂ ಏನೋ ಕೆಟ್ಟವಾಸನೆ, ಸೀದ ವಾಸನೆ, ಘಾಟು/ಕಮಟು ವಾಸನೆ ಬರುತ್ತಿದೆ ಎನ್ನಬಹುದು.

### ಡೆಲಿರಿಯಂ ರೋಗಿಯ ಆರೈಕೆ;–

ಸನ್ನಿ ಇರುವ ರೋಗಿಯ ಆರೈಕೆ ಬಹಳ ಮುಖ್ಯ ರೋಗಿಯನ್ನು ಒಳ್ಳೆಯ ಗಾಳಿ, ಬೆಳಕಿರುವ ಕೊಠಡಿಯಲ್ಲಿರಿಸಿ, ಮಂದ ಬೆಳಕು (ಅ) ಶುದ್ಧ ಗಾಳಿ ಇಲ್ಲದ ರೂಮು ಇನ್ನಷ್ಟು ತೊಂದರೆ ಗೊಂದಲವನ್ನು ಸೃಷ್ಟಿಸಬಲ್ಲದು. ರೋಗಿಯನ್ನು ನೋಡಿಕೊಳ್ಳಲು ರೋಗಿಯ ವಿಶ್ವಾಸಕ್ಕೆ ಪಾತ್ರರಾದ ಒಬ್ಬಿಬ್ಬರು ಮಾತ್ರ ಇರಲಿ, ಹೊಸಬರು/ಅಪರಿಚಿತರು ಬೇಡ ರೋಗಿ ಇರುವೆಡೆಯಲ್ಲಿ ಗದ್ದಲ, ದೊಡ್ಡ ಶಬ್ದಗಳು, ಜನ ಗಟ್ಟಿಧ್ವನಿಯಲ್ಲಿ ಮಾತ್ರನಾಡುವುದು, ಓಡಾಡುವುದು ಬೇಡ, ಪರಿಸರ ಪ್ರಶಾಂತವಾಗಿರಲಿ, ರೋಗಿಯ ಹತ್ತಿರ ಬರುವ ವ್ಯಕ್ತಿಗಳು (ಅ) ಸಹಾಯ ಮಾಡಲು ಬರುವವರು ತಾವು ಯಾರು, ಏನು ಮಾಡಲು ಬರುತ್ತಿದ್ದೇವೆ ಎಂದು ಸ್ಪಷ್ಟವಾಗಿ ಹೇಳಬೇಕು, ರೋಗಿಗೆ ಸಮಯಕ್ಕೆ ಸರಿಯಾಗಿ ಆಹಾರ ನೀಡಬೇಕು, ಗಲೀಜಾದ ಬಟ್ಟೆ/ಹೊದಿಕೆಗಳನ್ನು ಬದಲಿಸಬೇಕು ಸ್ವಚ್ಛತೆಗೆ ಗಮನ ನೀಡಬೇಕು, ರೋಗಿಯ ಸುರಕ್ಷತೆಗೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಬೇಕು.

# ಅಹಿಂಸಾ ಮಾಂಸ

ಪ್ರಾಣಿಗಳನ್ನು ಕೊಲ್ಲದೆ, ಪ್ರಾಣಿಗಳ ಮೈಯಿಂದ ಒಂದೆರೆಡು ಜೀವಕೋಶ ತೆಗೆದು ಲ್ಯಾಬೋರೇಟರಿಯಲ್ಲಿ, ಗಾಜು ತಟ್ಟೆಯಲ್ಲಿ ಬಿತ್ತಿ, ಬೆಳೆಸಿದ ಮಾಂಸವೇ ಅಹಿಂಸಾ ಮಾಂಸ ಮಾಂಸ. ಇದು 'ಬಾಡು ಬೇಸಾಯ' ಅರ್ಥಾತ್ ಮಾಂಸ ಕೃಷಿ, ಜೀವ ಕೋಶ ಜೈವಿಕ ಇಂಜಿನಿಯರಿಂಗ್ ತಂತ್ರಜ್ಞಾನ ಇದನ್ನು ಕ್ಲೀನ್ ಮೀಟ್ ಎಂದು ಕರೆದರೆ ಹೆಚ್ಚು ಸೂಕ್ತ.

ವಿಶ್ವಾದ್ಯಂತ ಸಸ್ಯಾಹಾರದ ಬಗ್ಗೆ, ಮಾಂಸಯುಕ್ತ ಆಹಾರದ ಬಗ್ಗೆ ಪ್ರಜ್ಞೆ ಮೂಡಿಸುವ ಕೆಲಸ ನಡೆದಷ್ಟೂ ಮಾಂಸಾಹಾರ ಸೇವನೆ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಮಾಂಸಾಹಾರಿಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಇಟೆಲಿಯ 'ಸ್ಲೋ ಫುಡ್ ಕಂಪೆನಿ'ಯ ಪ್ರಕಾರ ೨೦ನೇ ಶತಮಾನದ ಅಂತ್ಯದ ವೇಳೆಗೆ ಜಾಗತಿಕ ಮಾಂಸಾಹಾರ ಸೇವನೆ ಪ್ರಮಾಣ ೪೫ ದಶಲಕ್ಷ ಟನ್‌ನಷ್ಟಿದ್ದರೆ, ಇದು ೩೦೦ ದಶಲಕ್ಷ ಟನ್ನಿಗೆ ಏರಿದೆ, ಪರಿಸ್ಥಿತಿ ಹೀಗೆಯೇ ಮುಂದುವರಿದರೆ ೨೦೫೦ರ ವೇಳೆಗೆ ೬೦೦ ದಶಲಕ್ಷ ಟನ್ನಿಗೆ ಏರಿಕೆ ಆಗುವ ಸಂಭವವಿದೆ.

ವಿಶ್ವ ಕ್ಲೀನ್ ಮೀಟ್ ತಜ್ಞರ ಒಕ್ಕೂಟ ೨೦೦೮ರಲ್ಲಿ ಮೊದಲ ಅಂತಾರಾಷ್ಟ್ರೀಯ ಸಮಾವೇಶ ಏರ್ಪಡಿಸತು. ಅದರ ಅತಿಥೇಯ ನಾರ್ವೆಯ ಆಹಾರ ಸಂಶೋಧನಾ ಸಂಸ್ಥೆ (ಫುಡ್ ರಿಸರ್ಚ್ ಇನ್ಸ್ಟಿಟ್ಯೂಟ್)ಯಲ್ಲಿ ಕ್ಲೀನ್ ಮೀಟ್ ಉತ್ಪಾದನೆ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು ಸಮಾವೇಶದ ಮುಖ್ಯ ಉದ್ದೇಶ, ಅಹಿಂಸಾ ಮಾಂಸ ಕೃಷಿಯನ್ನು ಒಂದು ವ್ಯಾಪಾರ ಉದ್ದಿಮೆಯನ್ನಾಗಿ ಬೆಳೆಸುವುದೇ ಆಗಿತ್ತು. ಲಾಭೋದ್ದೇಶ ರಹಿತ ಸಂಸ್ಥೆಗಳಾದ 'ನ್ಯೂ ಹಾರ್ವೆಸ್ಟ್' ಹಾಗೂ 'ಗುಡ್ ಫುಡ್ ಇನ್‌ಸ್ಟಿಟ್ಯೂಟ್' ಕಂಪನಿಗಳು ವರ್ಷ–ವರ್ಷ ಉದ್ದಿಮೆಗಳು, ವಿಜ್ಞಾನಿಗಳು, ಹೂಡಿಕೆದಾರರು, ಸಮರ್ಥ ಸಹೋದ್ಯಮಿಗಳನ್ನು ಒಂದು ಕಡೆ ಸೇರಿಸಿ ಮಾಂಸ ಕೃಷಿ ಬಗ್ಗೆ ಚರ್ಚಿಸಲು ವಾರ್ಷಿಕ ಅಧಿವೇಶನಗಳನ್ನು ನಡೆಸತೊಡಗಿವೆ.

ನೆದರ್‌ಲ್ಯಾಂಡ್‌ನ ಮಾಸ್ಟ್ರಿಚ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ಮಾರ್ಕ್ ಪೋಸ್ಟ್ ಮೇ ೨೦೧೩ರಲ್ಲಿ, ಹಸುವಿನ ಸ್ಟೆಮ್ ಸೆಲ್ಸ್ (ಕಾಂಡ ಕೋಶ) ಬಳಸಿ ವಿಶ್ವದಲ್ಲೇ ಪ್ರಥಮ ಬಾರಿಗೆ ಪ್ರಯೋಗಾಲಯದಲ್ಲಿ ಗಾಜು ತಟ್ಟೆಯಲ್ಲಿ ಬಿತ್ತಿ, ಬೆಳೆಸಿ, ಸ್ನಾಯುತಂತು ಎಬ್ಬಿಸಿ, ಹಬ್ಬಿಸಿ ಅಹಿಂಸಾ ಮಾಂಸ ತಯಾರಿಸಿ ಅದನ್ನು ಬಳಸಿ, ಬರ್ಗರ್, ಪ್ಯಾಟಿ ತಯಾರಿಸಲು ಡಾ. ಪೋಸ್ಟ್‌ಗೆ ಎರಡು ವರ್ಷಗಳೇ ಬೇಕಾಯಿತು. ಈ ಬರ್ಗರ್ ಪ್ಯಾಟಿಯಲ್ಲಿ ೨೦ಸಾವಿರ ತೆಳು ಸ್ನಾಯುತಂತು ಎಳೆಗಳನ್ನು ಬಳಸಲಾಗಿತ್ತು, ಒಂದು ಬರ್ಗರ್ ಪ್ಯಾಟಿ ತಯಾರಿಸಲು ತಗುಲಿದ ವೆಚ್ಚ ಮೂರು ಲಕ್ಷ ಡಾಲರ್, ಅಷ್ಟೊಂದು ದುಬಾರಿ ವೆಚ್ಚಕ್ಕೆ ಕಾರಣ ಕಾಂಡ ಕೋಶ, ಸ್ನಾಯುತಂತು ಬೆಳೆಸಲು ಬಳಸಿದ ಹಸುವಿನ ಭ್ರೂಣದಿಂದ ಪಡೆದ ಸಮೃದ್ಧ ರಕ್ತ ಸೀರಮ್, ಒಂದು ಲೀಟರ್ ಭ್ರೂಣ ರಕ್ತ ಸೀರಮ್‌ಗೆ ೩೦೦ ರಿಂದ ೬೦೦ ಡಾಲರ್ ತೆತ್ತಿದ್ದರು, ಒಂದು ಬರ್ಗರ್ ಪ್ಯಾಟಿ ತಯಾರಿಸಲು ೫೦ಲೀಟರ್ ಭ್ರೂಣ ರಕ್ತ ಸೀರಮ್ ಬೇಕು.

ತದನಂತರ ಡಾ. ಪೋಸ್ಟ್ ೨೦೧೩ರ ಆಗಸ್ಟ್ ೫ ರಂದು, ಲಂಡನ್‌ನಲ್ಲಿ ಸಮಾವೇಶಗೊಂಡಿದ್ದ ಪತ್ರಿಕಾಗೊಷ್ಠಿಯಲ್ಲಿ ವರದಿಗಾರರ ಮುಂದೆ ಬರ್ಗರ್ ಪ್ಯಾಟಿ ತಯಾರಿಸಿ ಪ್ರದರ್ಶಿಸಿದರು, ಪತ್ರಿಕಾ ಮಂದಿ ಪ್ಯಾಟಿ ಬೇಯಿಸಿ, ತಿಂದು ಚಕಿತರಾದರು, ನಂತರ ಡಾ. ಪೋಸ್ಟ್ 'ಮೋಸಾ ಮೀಟ್' ಸ್ಟಾರ್ಟ್ ಅಪ್ ಕಂಪನಿ ಆರಂಭಿಸಿದರು.

ಕ್ಲೀನ್ ಮೀಟ್ ಕೃಷಿಯ ಮೂರು ಹಂತಗಳು, ಕ್ಲೀನ್ ಮೀಟ್ ಬೆಳೆಯಲು ಪರಿಶುದ್ಧ ಪರಿಸರ ಬೇಕು, ಮೂರು ಪರಿಕರಗಳು, ಮೂರು ಹಂತಗಳು...

೧. ಜೀವ ಕೋಶ. ೨. ಆಹಾರ ದ್ರವ ಮಾಧ್ಯಮ. ೩. ರಚನಾ ಚೌಕಟ್ಟು.

ಜೀವಂತ ಪ್ರಾಣಿಯಿಂದ ಸ್ವಲ್ಪವೇ ಸ್ವಲ್ಪ ಜೀವಕೋಶ ಶೇಖರಿಸಿದರೆ ಸಾಕು. ಒಮ್ಮೆ ಶೇಖರಿಸಿದರೆ ಸಾಕು ಮತ್ತೆ ಮತ್ತೆ ಶೇಖರಿಸುವ ಅಗತ್ಯವಿಲ್ಲ, ಸ್ಟೆಮ್‌ಸೆಲ್ಸ್ (ಕಾಂಡಕೋಶ), ಅಂಗಾಂಶ, ಸ್ನಾಯುತಂತು ಕೋಶ... ಹೀಗೆ ಯಾವುದಾದರೂ ಆಗಬಹುದು. ಆದರೆ, ಸ್ನಾಯು ತಂತು ಕೋಶ ಒಳ್ಳೆಯದು ಪ್ರಾಣಿಯ ಯಾವುದೇ ಅಂಗ ಆದರೂ ಆಯಿತು ದನ, ಕುರಿ, ಮೇಕೆ, ಹಂದಿ, ಕೋಳಿ, ಮೊಲ, ಮೀನು, ಕಪ್ಪೆ... ಹೀಗೆ ಯಾವುದಾದರೂ ಆಯಿತು, ಕೋಳಿ ಕಳಚಿದ ಗರಿ ಆದರೂ ಆಯಿತು.

ಜೀವಕೋಶ ಬೆಳೆಸಲು ಪೌಷ್ಟಿಕ ದ್ರವ ಆಹಾರ ಮಾಧ್ಯಮ ಬೇಕು, ಜೀವ ಕೋಶ ಸ್ನಾಯು ತಂತುಗಳಾಗಿ, ಅಂಗಾಂಶವಾಗಿ, ಮಾಂಸವಾಗಿ ಬೆಳೆಯಲು ಪ್ರೋಟೀನ್, ಕೊಬ್ಬು, ವಿಟಮಿನ್, ಖನಿಜ ಅಂಶ ಹಾಗೂ ಆಮ್ಲಜನಕ ಇಂಧನ ಶಕ್ತಿ ಒದಗಿಸುವ 'ಬಯೋ ರಿಯಾಕ್ಟರ್ಸ್'.

ಒದಗಿಸುವ ಆಹಾರ ಮಾಧ್ಯಮ ಅದಾಗಿರಬೇಕು, ಜೀವಂತ ಪ್ರಾಣಿಗಳಲ್ಲಿ ಜೀವಕೋಶ/ಸ್ನಾಯು/ಮಾಂಸಕ್ಕೆ ಆಹಾರ, ಆಮ್ಲಜನಕ, ಇಂಧನ ಒದಗಿಸುವುದು ರಕ್ತ, ಆದರೆ ಗಾಜು ತಟ್ಟೆ ಮಾಂಸಕ್ಕೆ ಇವೆಲ್ಲಾ ಒದಗಿಸುವುದು ಆಹಾರ ಮಾಧ್ಯಮ/ಬಯೋ ರಿಯಾಕ್ಟರ್/ಪೌಷ್ಟಿಕ ದ್ರವ ಆಹಾರ ಮಾಧ್ಯಮವನ್ನು ತಟ್ಟೆಗೆ ಸುರಿಯಬೇಕು.

ಸೂಕ್ತ ರಚನಾ ಚೌಕಟ್ಟು ಬೇಕು, ಇದು ತಿನ್ನಲು ಯೋಗ್ಯವೂ ಆಗಿರಬೇಕು, ಮಾಂಸ ಒಂದು ಪ್ರಮಾಣಕ್ಕೆ ಬೆಳೆದು ಒಂದು ಆಕಾರಕ್ಕೆ ಬರಲು ಈ ಚೌಕಟ್ಟು ಅಗತ್ಯ ಇದು ಮೆದು ರಚನೆ , ಹಿಗ್ಗುತ್ತದೆ, ಬಗ್ಗುತ್ತದೆ, ತಟ್ಟೆಯೊಳಗೆ ಸ್ನಾಯು ತಂತುಗಳು ಒಂದರ ಮೇಲೆ ಒಂದರಂತೆ ಪದರಪದರವಾಗಿ ಸಹಾಯ ಮಾಡುವುದೂ, ಮಾರ್ಗದರ್ಶನ ನೀಡುವುದೂ ಈ ರಚನಾ ಚೌಕಟ್ಟೇ, ಇದೂ ಮಾಂಸದಲ್ಲಿ ಒಂದಾಗಿ ಆಹಾರವಾಗಿ ಹೋಗುತ್ತದೆ.

ಗಾಜು ತಟ್ಟೆಯಲ್ಲಿರುವ ಪೌಷ್ಟಿಕ ದ್ರವ ಆಹಾರ ಮಾಧ್ಯಮಕ್ಕೆ ಜೀವಕೋಶ/ಸ್ನಾಯು ತಂತುಕೋಶ ಬಿತ್ತಿ, ಸೂಕ್ತ ತಾಪಮಾನ ಒದಗಿಸಿದಾಗ ಸ್ನಾಯುತಂತುಗಳು ಬೆಳೆಯುತ್ತಾ ಹರಡುತ್ತಾ, ಚೌಕಟ್ಟಿನ ಆಸರೆಯಲ್ಲಿ ಏರುತ್ತಾ ಪದರ ಮೇಲೆ ಪದರ ಕೂರುತ್ತಾ ಉದ್ದ, ಅಗಲ, ಎತ್ತರ, ತ್ರಿ–ಆಯಾಮದಲ್ಲಿ, ಒಂದೆರೆಡು ತಿಂಗಳಲ್ಲಿ ಮೆದು ಮಾಂಸ ಮುದ್ದೆಯಾಗುತ್ತದೆ. ಜೀವಂತ ಪ್ರಾಣಿಯಲ್ಲಿ ಮಾಂಸ ಬೆಳೆಯುವಾ ಏನೆಲ್ಲಾ ಜೈವಿಕ ಪ್ರಕ್ರಿಯೆ ನಡೆಯುತ್ತದೆಯೋ ಅದೆಲ್ಲಾ ಗಾಜು ತಟ್ಟೆಯಲ್ಲೂ ನಡೆಯುತ್ತದೆ.

ಅಹಿಂಸಾ ಮಾಂಸ ತಯಾರಿಕೆಗೆ ಜಿನ್(ತಳಿ) ಇಂಜಿನಿಯರಿಂಗ್ ತಂತ್ರಜ್ಞಾನದ ಅವಶ್ಯಕತೆ ಇಲ್ಲ, ಆದರೂ ಅದನ್ನು ಬೆಳೆಸಿ ಜೀನ್ ಮಾರ್ಪಾಡು ಮಾಡಿ, ಮಾಂಸದ ಗುಣಮಟ್ಟ ಹೆಚ್ಚಿಸಬಹುದು. ಸ್ಥಿರತೆ ಹೆಚ್ಚಿಸಬಹುದು, ಅಗತ್ಯ ಕೊಬ್ಬಿನ ಆಮ್ಲ, ಅಮೈನೋ ಆಮ್ಲಗಳನ್ನೂ ಕೂಡಿಸಬಹುದು.

ಸ್ನಾಯು ತಂತುಗಳ ವೃದ್ಧಿಯೂ ತ್ವರಿತಗೊಳಿಸಬಹುದು, ಪ್ರಾಣಿಯಲ್ಲಿ ಮಾಂಸ ತಯಾರಾಗುವುದಕ್ಕಿಂತಲೂ ಶೀಘ್ರವಾಗಿ ಗಾಜು ತಟ್ಟೆಯಲ್ಲಿ ಮಾಂಸ ಬೆಳೆಸಬಹುದು, ಆದರೆ, ಜೀನ್ ಮಾರ್ಪಾಡು ಮಾಡದೆಯಾ ಕೇವಲ ಆಹಾರ ದ್ರವ ಮಾಧ್ಯಮದಲ್ಲಿಯೇ ಮಾಡದೆಯೂ ಕೇವಲ ಆಹಾರ ದ್ರವ ಮಾಧ್ಯಮದಲ್ಲಿಯೇ ಬದಲಾವಣೆ ಮಾಡಿಯೂ, ವಸ್ತು ಸ್ಥಿತಿ ಬದಲಾವಣೆ ಮಾಡಿಯೂ ಅದೇ ಸುಧಾರಣೆ ತರಿಸಬಹುದು ಕೂಡ. ಸದ್ಯಕ್ಕೆ ಬರೀ ಮಾಂಸ, ಮುಂದೆ ಮೂಳೆ, ಮಾಂಸ, ರಕ್ತನಾಳ ಮಾಂಸ!

'ಹಿಂಸಾ ಮಾಂಸವೇ ಬೇಕು, ಅದೇ ರುಚಿ, ಅಹಿಂಸಾ ಮಾಂಸ ಸಹಜ ಮಾಂಸವೇ ಅಲ್ಲ, ಅದು ಸಸ್ಯ ಮಾಂಸ, ಜಾನುವಾರುಗಳು ಅವುಗಳ ಮೈಯಿಂದ ಮಾಂಸವನ್ನಷ್ಟೇ ಕೊಡುವುದಿಲ್ಲ, ರಕ್ತ, ತೊಗಲು, ಚರ್ಮ, ಮೂಳೆ, ಉಣ್ಣೆ, ಕೂದಲು, ಮಲ–ಮೂತ್ರ, ಔಷಧಿಗಳಿಗೆ ಬೇಕಾದ ಹಲವಾರು ವಸ್ತುಗಳನ್ನೂ, ಭಾಗಗಳನ್ನು ಕೊಟ್ಟು ಮಾನವ ಕಲ್ಯಾಣಕ್ಕಾಗಿ ತಮ್ಮ ದೇಹವನ್ನು ಅರ್ಪಿಸುತ್ತವೆ, ನಮಗೆ ಆ ಮಾಂಸವೇ ಬೇಕು' ಎನ್ನುವ ಮಂದಿಯೂ ಇದ್ದಾರೆ, ಪರ–ವಿರೋಧಗಳ ನಡುವೆ ಸದ್ದಿಲ್ಲದೆ ಅಹಿಂಸಾ ಮಾಂಸ ತಟ್ಟೆಗೆ ಬೀಳಲಿ! ಬೇಕೆಂದವರ ಬಾಯಲ್ಲಿ ಸ್ವಾಹಾ ಆಗಲಿ.

# ನಮ್ಮ ಯೋಜನೆಗಳು

1. ನೆಲೆ ವೃದ್ಧಾಶ್ರಮ: ಮಹಿಳೆಯರಿಗಾಗಿ ವೃದ್ಧಾಶ್ರಮ ಹಾಗು ಟರ್ಮಿನಲ್ ಕೇರ್ ಸೆಂಟರ್
   ಸ್ಥಾಪನೆ–ಸೆಪ್ಟಂಬರ್–2014,
   ವಿಳಾಸ–ದಾಸನಕೊಪ್ಪಲು ಮುಖ್ಯ ರಸ್ತೆ, ರೂಪ ನಗರ, ಮೈಸೂರು.

   ಒಟ್ಟು ದಾಖಲಾತಿ – 79
   ಇಂದಿನ ದಾಖಲಾತಿ – 13
   ಡಿಸ್ಚಾರ್ಜ್ –65

2. ಮಾನಸಧಾಮ : ನಿರ್ಗತಿಕ ಮಾನಸಿಕ ಅಸ್ವಸ್ಥ ರೋಗಿಗಳ ಆರೈಕೆ ಮತ್ತು ಪುನರ್ವಸತಿ ಕೇಂದ್ರ
   ಸ್ಥಾಪನೆ – ಜೂನ್ – 2018,
   ವಿಳಾಸ–ಚಿಕ್ಕಳ್ಳಿ, ಚಿಕ್ಕಳ್ಳಿ–ಭುಗತ್‌ಗಳ್ಳಿ ರಸ್ತೆ, ಟಿ.ನರಸಿಪುರ ರಸ್ತೆ, ಮೈಸೂರು.

   ಒಟ್ಟು ದಾಖಲಾತಿ – 73
   ಇಂದಿನ ದಾಖಲಾತಿ – 18
   ಮರುಸಂಘಟನೆ – 55

3. ಕರುಣಾ ನೆಲೆ : ಹಿರಿಯರಿಗಾಗಿ ವಸತಿ ಮತ್ತು ಆರೈಕೆ ಕೇಂದ್ರ,
   ಸ್ಥಾಪನೆ – ನವೆಂಬರ್–2019,
   ವಿಳಾಸ–ಕೆ, ಸಿ, ಬಡಾವಣೆ, ಲಲಿತ ಮಹಲ್ ಪ್ಯಾಲೆಸ್ ಹತ್ತಿರ, ಮೈಸೂರು.

   ಒಟ್ಟು ದಾಖಲಾತಿ – 28
   ಪ್ರಸ್ತುತ ದಾಖಲಾತಿ – 11
   ಡಿಸ್ಚಾರ್ಜ್ – 13

4. ಮಾನಸಧಾರ– ಮೈಸೂರು – ಪುನಃಚೇತನಕ್ಕಾಗಿ ಬರುವ ಮಾನಸಿಕ ರೋಗಿಗಳ ಹಗಲು ಆರೈಕೆ ಕೇಂದ್ರ
   ಸ್ಥಾಪನೆ – ಜೂನ್–2020,
   ವಿಳಾಸ–917, 5ನೇ ಮುಖ್ಯ ರಸ್ತೆ, ಮೈಲಾರ ದರ್ಶಿನಿ ಹೋಟೆಲ್ ಹತ್ತಿರ, ಅರವಿಂದ ನಗರ, ಮೈಸೂರು.

   ಒಟ್ಟು ದಾಖಲಾತಿ – 20
   ಪ್ರಸ್ತುತ –16
   ಡಿಸ್ಚಾರ್ಜ್ –0

5. ಪ್ರಾಥಾಮಿಕ ಆರೋಗ್ಯ ಕೇಂದ್ರ –ಕಾನೂರು
   ಸ್ಥಾಪನೆ– ಸೆಪ್ಟಬಂರ್–2019,
   ವಿಳಾಸ–ಪಿ,ಎಚ್,ಸಿ, ಕಾನೂರು, ವಿರಾಜಪೇಟೆ ತಾಲೋಕು, ಕೊಡಗು.

ನೀವು ಕೊಡುಗೆ ಕೊಡಲು ಬಯಸಿದರೆ–ಅವು ಈ ರೀತಿಯದ್ದಾಗಿರಲಿ

01. ದಿನದ ಊಟದ ಖರ್ಚು: ರೂ. 2500/.

02. ದತ್ತಿ ನಿಧಿಯನ್ನು ನೀಡಿ ಪ್ರೋತ್ಸಾಹಿಸಿ.

03. ಸ್ವೆಟರ್‌ಗಳು, ನೈಟಿಗಳು, ಪ್ಯಾಂಟುಗಳು, ಶರ್ಟ್‌ಗಳು, ಶಾಲು

04. ದಿನಪತ್ರಿಕೆಗಳು – ಪೇಪರ್ ಬ್ಯಾಗ್ ತಯಾರಿಸಲು.

05. ಹಣ್ಣುಗಳು, ಬಿಸ್ಕಟ್‌ಗಳು.

## DONATIONS ARE RECEIVED IN THESE WAYS

01.one day food cost Rs. 2500/-

02. Donations in Cheque\Cash

03. Clothes - Like Sweaters, Nighties, Pants, Shirts, Shawls

04. Newspapers-For paper bag making

05.Fruits, Biscuits

ಬ್ಯಾಂಕ್ ಮೂಲಕ ಹಣವನ್ನು ಕಳುಹಿಸುವ ದಾನಿಗಳಿಗೆ NEFT\RTGS ವಿವರ ಹೀಗಿದೆ

Accounts Details: -

| | | |
|---|---|---|
| Account Name | : - | Green Dot Trust® |
| Bank a\c | : - | Karnataka Bank Ltd. |
| Account Type | : - | Saving Bank |
| Account Number | : - | 5192500101739301 |
| I F S C code | : - | KARB0000519 |
| MICR | : - | 570052010 |
| Phone Pay | :- | 9845058023 |
| Google Pay | :- | 9845058023 |